**<u>ಸಾಕ್ಷಿಗೆ ದಿನಾಂಕ 21-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಪ್ರತಿವಾದಿಯ ಪರ ಶ್ರೀ.ಎಸ್ ಎಸ್ ಎಸ್ ವಕೀಲರಿಂದಃ</u>**

1. ನಾನು ಮನೆ ನಂ.349, 10ನೇ ಬಿ-ಮುಖ್ಯ ರಸ್ತೆ, 3ನೇ ಹಂತ, ಜಯನಗರ, ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನಾನು ಕಳೆದ 51 ವರ್ಷಗಳಿಂದ ಪೇಟಿಂಗ್, ಗ್ರಿಲ್ ಮತ್ತು ಪ್ಯಾಕಿಂಗ್ ಕೆಲಸ ಮಾಡಿಕೊಂಡಿರುತ್ತೇನೆ. ನಾನು ಪೇಟಿಂಗ್ ಕೆಲಸ ಮಾಡಲು ನೋಂದಣಿ ಮಾಡಿಸಿರುವುದಿಲ್ಲ. ಪ್ರತಿವಾದಿಯವರು ನನಗೆ ಕಳೆದ 51 ವರ್ಷಗಳಿಂದ ಪರಿಚಯವಿರುತ್ತಾರೆ. ಪ್ರತಿವಾದಿಯದ್ದು ಜೆ.ಪಿ. ನಗರದಲ್ಲಿ ಕಾರ್ಖಾನೆ ಇದ್ದು ಮೋಟಾರ್ ಗೆ ಸಂಬಂಧಿಸಿದಂತೆ ಮರದ ಪ್ಯಾಕೆಜಿಂಗ್ ಕೆಲಸ ಮಾಡುವುದರ ಮುಖಾಂತರ ಪರಿಚಯವಿರುತ್ತಾರೆ. ಪ್ರತಿವಾದಿಯು ಆಗಾಗ ಮರದ ಪ್ಯಾಕಿಂಗ್ ಕೆಲಸ ಕೊಡುತ್ತಿದ್ದರು ಹಾಗೂ ನಾನು ಅವರು ಕಾರ್ಖಾನೆ ಹೋಗಿ ಪ್ಯಾಕಿಂಗ್ ಕೆಲಸ ಮಾಡುತ್ತಿದ್ದೇನು ಎಂದರೆ ಸರಿ.

2. ಪ್ರತಿವಾದಿಯವರು ತಮ್ಮ ಕಾರ್ಖಾನೆಯಲ್ಲಿ ಅವರ ಮನೆಯ ಪೇಟಿಂಗ್ ಕೆಲಸದ ಬಗ್ಗೆ ಮಾತನಾಡಿದಾಗ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. 2019ರ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಿನಲ್ಲಿ ಪ್ರತಿವಾದಿಯು ಮನೆಯ ಪೇಟಿಂಗ್ ಬಗ್ಗೆ ನನ್ನ ಬಳಿ ಮಾತನಾಡಿರುತ್ತಾರೆ, ದಿನಾಂಕ ಮತ್ತು ಸಮಯ ನೆನಪಿಲ್ಲ. ನಾನು ಪ್ರತಿವಾದಿಯ ಮನೆಯ ಪೇಟಿಂಗ್ ಕೆಲಸವನ್ನು ಅಕ್ಟೋಬರ್-2019 ತಿಂಗಳಿನಲ್ಲಿ ಮಾಡಿರುತ್ತೇನೆ. ನನ್ನ ಮನೆಯಿಂದ ಪ್ರತಿವಾದಿಯ ಮನೆ ಸುಮಾರು 8-10 ಕಿ.ಮೀ.ಅಂತರದಲ್ಲಿದೆ ಎಂದರೆ ಸರಿ.

3. ನಾನು ಪೇಂಟ್ ಕೆಲಸ ಮಾಡುವ ಮುಂಚೆ ಪೇಂಟಿಂಗ್ ಗೆ ತಗಲುವ ವೆಚ್ಚದ ಬಗ್ಗೆ ಪ್ರತಿವಾದಿಯ ಮನೆಯನ್ನು ವೀಕ್ಷಣೆ ಮಾಡಿದ ನಂತರ ಮಾತನಾಡಿರುತ್ತೇನೆ. ಈ ಬಗ್ಗೆ ಅಂದಾಜು

ಪಟ್ಟಿಯನ್ನು ಪ್ರತಿವಾದಿಗೆ ನೀಡಿರುತ್ತೇನೆ. ಹುಳಿಮಾವುದಲ್ಲಿ ಸುಮಾರು 20-25 ಪೇಂಟಿಂಗ್ ಮತ್ತು ಹಾರ್ಡ್ ವೇರ್ ಅಂಗಡಿಗಳು ಇವೆ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಯ ಮಧ್ಯೆ ಮಾತುಕತೆ ಮುಗಿದ ನಂತರ ಪೇಂಟಿಂಗ್ ಅಂದಾಜು ಪಟ್ಟಿಯನ್ನು ಹುಳಿಮಾವುನಲ್ಲಿರುವ ಪೇಂಟಿಂಗ್ ಮತ್ತು ಹಾರ್ಡ್ ವೇರ್ ಅಂಗಡಿಗಳಿಂದ ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ.

4. ಬನಶಂಕರಿಯಲ್ಲಿರುವ ಅಕ್ಷಯ ಪೇಂಟ್ಸ್ ಮತ್ತು ಕೆಮಿಕಲ್ಸ್ ಅಂಗಡಿಯಿಂದ ಅಂದಾಜು ಪಟ್ಟಿಯನ್ನು ಪಡೆದು ಪ್ರತಿವಾದಿಗೆ ನೀಡಿರುತ್ತೇನೆ. ಅಕ್ಷಯ ಪೇಂಟ್ಸ್ ಮತ್ತು ಕೆಮಿಕಲ್ಸ್ ಅಂಗಡಿಯವರನ್ನು ಯಾವ ದಿನಾಂಕ ಮತ್ತು ಸಮಯದಲ್ಲಿ ಸಂಪರ್ಕ ಮಾಡಿದ್ದೀರಾ ಎಂದರೆ ಸಾಮಾನ್ಯವಾಗಿ ಬೆಳಿಗ್ಗೆ 10 ಗಂಟೆಗೆ ಅಂಗಡಿಗೆ ಹೋಗುತ್ತೇನೆ ಆದರೆ ದಿನಾಂಕ ಹೇಳಲು ಬರುವುದಿಲ್ಲ. ಪ್ರತಿವಾದಿಗೆ ಅಂದಾಜು ಪಟ್ಟಿ ನೀಡಿ ಅವರ ಮೌಖಿಕ ಒಪ್ಪಿಗೆ ಪಡೆದಿರುತ್ತೇನೆ, ಆದರೆ ಲಿಖಿತ ಒಪ್ಪಿಗೆ ಪಡೆದಿರುವುದಿಲ್ಲ ಎಂದರೆ ಸರಿ.

5. ನಾನು ಪೇಂಟ್ ಮಾಡುವ ಮನೆ ನೋಡಿಕೊಂಡು ಕೆಲಸಗಾರರನ್ನು ನೇಮಿಸಿಕೊಳ್ಳುತ್ತೇನೆ. ಪ್ರತಿವಾದಿಯ ಮನೆಯ ಪೇಟಿಂಗ್ಸ್ ವಿವರಣೆ ನೀಡಬಹುದ ಎಂದರೆ ಪೇಂಟ್ಸ್, ಬ್ರೆಶ್, ರೋಲರ್, ಸಾಲ್ಟ್ ಪೇಪರ್, ಏಶಿಯನ್ ಪೇಂಟ್ ಪಟ್ಟಿ ಬಳಸಿರುತ್ತೇನೆ, ಸಾಕ್ಷಿ ಮುಂದುವರೆದು ನಿಕರವಾದ ಬಳಕೆಯಾದ ಪೇಂಟ್ಸ್ ಗಳ ಬಗ್ಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದ ವಸ್ತುಗಳು ಸಾಮಾನ್ಯವಾಗಿ ಯಾವುದೇ ಮನೆ ಪೇಟಿಂಗ್ ಗೆ ಬೇಕಾಗುವ ವಸ್ತುಗಳು ಎಂದರೆ ಸರಿ.

6. ಪ್ರತಿವಾದಿಯ ಮನೆಯ ಪೇಟಿಂಗ್ ಕೆಲಸವನ್ನು ಯಾವ ದಿನ ಪ್ರಾರಂಭಿಸಿ ಯಾವ ದಿನ ಮುಕ್ತಾಯಗೊಳಿಸಿದ್ದೀರಿ ಎಂದರೆ 2019 ರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ಮುಕ್ತಾಯಗೊಳಿಸಿರುತ್ತೇನೆ. ಸಾಕ್ಷಿಗೆ ನಿಪಿ.1 ಅಂದಾಜು ಪಟ್ಟಿಯನ್ನು ತೋರಿಸಿ ಸಾಲ್ಟ್ ಪೇಪರ್ ಎಂದು

ಬರೆಯಲಾಗಿದೆಯೇ ಎಂದು ಕೇಳಿದಾಗ ಸ್ಟಾಂಡ್ ಪೇಪರ್ ಎಂದು ಬರೆದಿದ್ದು ಸಾಲ್ಟ್ ಪೇಪರ್ ಎಂದು ಬರೆದಿರುವುದಿಲ್ಲ. ಪ್ರತಿವಾದಿಗೆ ಅಂದಾಜು ಪಟ್ಟಿಯನ್ನು ತೋರಿಸಿ ಅದೇ ದಿನ ಒಪ್ಪಿಗೆ ಪಡೆದು ಕೆಲಸ ಪ್ರಾರಂಭಿಸಿರುತ್ತೇನೆ. ಪ್ರತಿವಾದಿಯವರು ಯಾವ-ಯಾವ ಪೇಂಟ್ ಕೆಲಸ ಮಾಡಬೇಕೆಂದು ಬರವಣಿಗೆಯಲ್ಲಿ ನೀಡಿರುವುದಿಲ್ಲ.

7. ದಿಃ31.10.2019 ರಂದು ಅಕ್ಷಯ ಪೇಂಟ್ಸ್ ಮತ್ತು ಕೆಮಿಕಲ್ಸ್ ಅಂಗಡಿಯಿಂದ ಪೇಂಟ್ಸ್ ಮತ್ತು ಇತರೆ ಉಪಕರಣಗಳನ್ನು ಖರೀದಿಸಿ ನಾನು ಹಣ ಪಾವತಿಸಿರುತ್ತೇನೆ. ಹಣ ಪಾವತಿ ಮಾಡಿದ ಬಗ್ಗೆ ಯಾವುದೇ ರಶೀದಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ.3 ರಲ್ಲಿ ಪ್ರತಿವಾದಿಯವರ ಸಹಿ ಇಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರ. ನನ್ನ 2019 ರಿಂದ ಇಲ್ಲಿಯವರೆಗಿನ ಆದಾಯ ತೆರಿಗೆ ಪಾವತಿಯಲ್ಲಿ ಪ್ರತಿವಾದಿಯಿಂದ ಹಣ ಬಾಕಿ ಇದೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ.

8. ಪ್ರತಿವಾದಿಯ ಮನೆಯ ಪೇಟಿಂಗ್ ಕೆಲಸವನ್ನು 6 ಜನ ಮಾಡಿರುತ್ತಾರೆ. ಪೇಂಟಿಂಗ್ ಶುಲ್ಕ ರೂ.40,000/- ಕೆಲಸಗಾರರ ಸಂಬಳ ರೂ.50,000/- ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಯ ಮನೆಯ ಪೇಟಿಂಗ್ ಕೆಲಸವನ್ನು 40 ರಿಂದ 45 ದಿನಗಳಲ್ಲಿ ಮುಗಿಸಿರುತ್ತಾರೆ. ಪ್ರತಿವಾದಿಗೆ ಒಂದು ವಾರದಲ್ಲಿ ಪೇಟಿಂಗ್ ಕೆಲಸವನ್ನು ಸಂಪೂರ್ಣ ಮಾಡಿಕೊಡುತ್ತೇನೆ ಎಂದು ಆಶ್ವಾಸನೆ ನೀಡಿ ನಂತರ ಒಬ್ಬರು ಅಥವಾ ಇಬ್ಬರನ್ನು ಕಳುಹಿಸಿ ಒಂದು ತಿಂಗಳಿನಲ್ಲಿ ಕೆಲಸ ಮುಗಿಸಿರುತ್ತೇನೆ ಎಂದರೆ ಸರಿಯಲ್ಲ.

9. ನಿಪಿ.1 ಮತ್ತು 2 ರ ದಾಖಲೆಗಳನ್ನು ಈ ದಾವೆಗೆ ಅನುಕೂಲವಾಲೆಂದ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮನೆಯ ಪೇಟಿಂಗ್ ಕೆಲಸವು ಜನವರಿ-2019 ಕ್ಕಿಂತ ಮುಂಚೆ ಮುಕ್ತಾಯವಾಗಿತ್ತು ಎಂದರೆ ಸರಿಯಲ್ಲ. ನಿಪಿ.3 ರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ಗುರುತಿಸಲು ಕೇಳಿದಾಗ ಸಾಕ್ಷಿಯು ತನ್ನ ಸಹಿಯೆಂದು ಗುರುತಿಸಿದ್ದು ಸದರಿ ದಾಖಲೆಯನ್ನು **ನಿಡಿ.1 ಮತ್ತು ಸಾಕ್ಷಿಯ ಸಹಿಯನ್ನು ನಿಡಿ.1 ಎ** ಎಂದು ಗುರುತಿಸಲಾಯಿತು.

10. ನಿಡಿ.1 ನ್ನು ನಾನು ಸಂಪೂರ್ಣ ಹಣ ಸ್ವೀಕರಿಸಿರುತ್ತೇನೆ ಎಂದು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.1 ನ್ನು ನಾನು ಸರ್ವೀಸ್ ಚಾರ್ಜ್ ಸ್ವೀಕರಿಸಿದ ಬಗ್ಗೆ ಸಹಿ ಮಾಡಿರುತ್ತೇನೆ. ನಿಡಿ.1 ರಲ್ಲಿ ಕಾಣಿಸಿರುವ ಹಣವನ್ನು ನಾನು ಕೆಲಸ ಪ್ರಾರಂಭ ಮಾಡಿದ ನಂತರ ದಿಃ14.01.2019 ರಂದು ನೀಡಿರುತ್ತಾರೆ ಎಂದರೆ ಸರಿ. ನಿಪಿ.1 ಮತ್ತು 2 ರಲ್ಲಿರುವ ದಿನಾಂಕ 31.10.2019 ಎಂದರೆ ಸರಿ. ದಿಃ31.10.2019 ಕ್ಕಿಂತ ಮುಂಚೆ ನಾನು ಪೇಂಟಿಂಗ್ ಕೆಲಸ ಮಾಡಿ ಮುಗಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಂಪೂರ್ಣ ಪೇಂಟಿಂಗ್ ಕೆಲಸ ಮಾಡಿಕೊಟ್ಟ ನಂತರ ಪ್ರತಿವಾದಿಯು ನಿಡಿ.1 ರಂತೆ ಹಣ ಪಾವತಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

11. ನಾನು ಪ್ರತಿವಾದಿಗೆ ನೀಡಿದ ಲೀಗಲ್ ನೋಟೀಸ್ ಗೆ ಪ್ರತಿಯಾಗಿ ಪ್ರತಿವಾದಿಯು ಮರು-ಉತ್ತರ ನೀಡಿದ್ದು, ಅದರಲ್ಲಿ ತಾನು ಸಂಪೂರ್ಣ ಹಣ ಪಾವತಿಸಿದ ಬಗ್ಗೆ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಪ್ರತಿವಾದಿಯ ಪರ ವಕೀಲರು ಕಾಲವಕಾಶ ಕೋರಿರುತ್ತಾರೆ. ಆದುದರಿಂದ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ನೀಡಲಾಗಿರುತ್ತದೆ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**